ಸಣ್ಣದ್ದಾಗಿ ಕಾಣಿಸುತ್ತಿದೆ ! ತೀರ ಹಳೆಯದಾಗಿದೆ. ಶಾಲೆಯ ಸುತ್ತಾ ಮುತ್ತಾ ಬಹಳ ಬದಲಾವಣೆ ಆಗಿದೆ. ದೊಡ್ಡ ದೊಡ್ಡ ಮಾಡರ್ನ್ ಮನೆಗಳು, ಅಂಗಡಿಗಳು, ಟಾರ್ ರಸ್ತೆ... !

ಭುವನ ಹೇಳಿದಳು 'ಸ್ಕೂಲ್ ಬಿಲ್ಡಿಂಗ್ ಹಳೆಯದಾಗಿದೆ. ಬಿರುಕು ಬಿಟ್ಟಿದೆ. ಮಳೆ ಬಂದರೆ ಸೋರುತ್ತೆ... ಮಕ್ಕಳು ಕೂರಲು ಬೆಂಚುಗಳಿಲ್ಲ. ಏಳು ಕ್ಲಾಸುಗಳಿಗೆ ನಾವಿಬ್ಬರೇ ಟೀಚರ್ಸ್... ಮುನಿಯೆಲ್ಲಪ್ಪ ಹೆಡ್ ಮಾಸ್ಟರ್... ಮತ್ತೆ ನಾನು... ಮಕ್ಕಳ ಸಂಖ್ಯೆಯೂ ತೀರ ಕಡಿಮೆ...'

'ಏಳನೇ ತರಗತಿಯವರೆಗೆ ಮಾತ್ರ ಇದೆ. ಮುಂದಕ್ಕೆ ಸ್ಕೂಲು ಬೆಳೆಯಲೇ ಇಲ್ಲ... ಹೈಸ್ಕೂಲಿಗೆ ಪೇಟೆಗೇನೇ ಹೋಗಬೇಕು...'

'ಹಳ್ಳಿಯಲ್ಲಿ ಪಾರ್ಟಿಗಳು... ರಾಜಕೀಯ...' ನಾನಾಗಿ ಕೇಳದೆಯೇ ತಾನಾಗಿಯೇ ಹಳ್ಳಿಯ ಸಂಗತಿಗಳನ್ನೆಲ್ಲಾ ಒಂದೊಂದಾಗಿ ಬಿಡಿಸುತ್ತಾ ಹೆಜ್ಜೆ ಹಾಕುತ್ತಾಳೆ ಭುವನ.

.....

'ಮಯೂರಿ, ನಮ್ಮ ಸ್ಕೂಲ್ ಹೆಡ್ ಮಾಸ್ಟರ್ ನಿನ್ನ ಕಾಗದ ನೋಡಿ ಎಷ್ಟು ಸಂತೋಷ ಪಟ್ರು ಗೊತ್ತಾ... ಅಮೇರಿಕಾದಿಂದ ಮಯೂರಿ ಅನ್ನೋವ್ರು ಕಾಗದ ಬರೆದಿದ್ದಾರೆ. ಈ ಶಾಲೆಯ ಹಳೆಯ ವಿದ್ಯಾರ್ಥಿಯಂತೆ. 'ಮೈ ಸ್ಕೂಲ್ ಈಸ್ ಗ್ರೇಟ್. ಮೈ ಟೀಚರ್ಸ್ ಆರ್ ಗ್ರೇಟ್. ನನಗೆ ವಿದ್ಯೆ ಕಲಿಸಿದ, ನೀತಿ ಕಥೆಗಳ ಮೂಲಕ ಬದುಕಲು ಕಲಿಸಿದ, ನನ್ನಲ್ಲಿ ಧೈರ್ಯ, ಆತ್ಮಸ್ಥೈರ್ಯ ತುಂಬಿದ ಈ ನನ್ನ ಶಾಲಾ ಮೇಸ್ಟ್ರುಗಳನ್ನು ಮರೆಯಲಾರೆ. ಐಯಪ್ಪ ಮೇಸ್ಟ್ರು, ಸುಬ್ಬಾರೆಡ್ಡಿ ಮೇಸ್ಟ್ರು, ಷರೀಫ್ ಮೇಸ್ಟ್ರು, ರಾಮಾಶಾಸ್ತ್ರಿ ಮೇಸ್ಟ್ರು, ಇವರೆಲ್ಲಾ ಸದಾ ನನ್ನ ನೆನಪಿಗೆ ಬರುತ್ತಿರುತ್ತಾರೆ. ಇವರಿಗೆಲ್ಲಾ ನಾನು ಸದಾ ಚಿರಋಣಿ ಅಂತ ಬರೆದಿದ್ದಾರೆ. ಕ್ಲಾಸು ಕ್ಲಾಸಿಗೂ ಬಂದು ನಿನ್ನ ಪತ್ರ ಓದಿ ಓದಿ ಅಡ್ಡಾಡಿದರು. ಆಗ ಅವರ ಕಣ್ಣುಗಳಲ್ಲಿ ಆನಂದದ ನೀರು ತುಂಬಿತ್ತು... 'ನೀವೂ ಇವರಂತೆ ಆಗಬೇಕು. ನೀವು ಓದಿದ ಈ ಶಾಲೆಯನ್ನು ಮರೆಯಬಾರದು. ಶಾಲೆಗೆ ಆಗಾಗ ಬರುತ್ತಿರಬೇಕು. ಶಾಲೆಯ ಅಭಿವೃದ್ಧಿಗೆ ನೀವೂ ಹೆಗಲು ಕೊಡಬೇಕು' ಅಂತೆಲ್ಲಾ ಮಕ್ಕಳಿಗೆ ಹೇಳಿದರು. ಹಳೆಯ ವಿದ್ಯಾರ್ಥಿಗಳಿಗೆಲ್ಲಾ ಆ ನಿನ್ನ ಪತ್ರ ತೋರಿಸಿದರು...'

ಇಬ್ಬರೂ ಮಾತನಾಡುತ್ತಾ ಹೆಜ್ಜೆ ಹಾಕುತ್ತೇವೆ. ಸ್ಕೂಲಿನ ಹಳೆಯ ದಿನಗಳನ್ನು ಮೆಲುಕು ಹಾಕುತ್ತೇವೆ. ಆಗಿನ ತುಂಟಾಟಿಕೆಗಳನ್ನು ನೆನೆದು ನಗುತ್ತೇವೆ.

'ಭುವನ, ನಮ್ಮ ಕೈಲಾಸ ಪರ್ವತ, ಮಂದಾರ ಪರ್ವತ, ಭೀಮೇಶ್ವರ ಬೆಟ್ಟ... ಅದೇನೇ... ಆ ನಲ್ಲಗುಂಡ್ಲು ಕೊಂಡ, ಅದಕ್ಕೆ ನಮಸ್ಕರಿಸಿ, ಪ್ರದಕ್ಷಿಣೆ ಮಾಡಿ ಆ ನಂತರ ಕ್ಷೀರಸಾಗರ, ಮಾನಸ ಸರೋವರ... ಅದೇನೇ ಆ ದೊಡ್ಡ ಕೆರೆ ಅದರಲ್ಲಿ ಕಾಲಾಡಿಸಿ, ತಲೆ ಮೇಲೆ ಆ ನೀರು ಪ್ರೋಕ್ಷಿಸಿಕೊಂಡು ಬಾಪನಪಲ್ಲಿ ಪ್ರವೇಶ ಮಾಡಬೇಕು... ಇದು ನನ್ನ ಆಸೆ'

'ಆಯಿತು ಹಾಗೆಯೇ ಮಾಡುವೆಯಂತೆ...'

'ಭುವನ, ನಾಳೆ ಸ್ಕೂಲಿಗೆ ಬಂದಾಗ, ಹಾಗೆಯೇ ಸುಬ್ಬಾರೆಡ್ಡಿ ಮೇಸ್ಟ್ರು ಮನೆಗೆ ಹೋಗಿ ಅವರ ಆಶೀರ್ವಾದ ಪಡೆಯಬೇಕು...'

'ಆಯಿತು ಹೋಗೋಣ... ಅದಕ್ಕೇನಂತೆ... ಅವರಿಗೂ ಸಂತೋಷ ಆಗುತ್ತೆ...'

ಮಾತನಾಡುತ್ತಾ ಮಾತನಾಡುತ್ತಾ ಹೊಲ ದಾಟಿ ಕೆರೆಯ ಅಂಚಿಗೆ ಬರುತ್ತೇವೆ.

'ಭುವನ... ನಾವು ಸರಿಯಾದ ದಾರಿಯಲ್ಲೇ ಬರ್ತಿದ್ದೇವಾ ? ಬಹಳ ಬದಲಾವಣೆ ಆಗಿದೆ... ಹದಿನೆಂಟು ವರ್ಷ ಆಯಿತಲ್ವಾ... ಆಗ ನಾನು ಸಣ್ಣ ಹುಡುಗಿ...'

ಭುವನ ಮೌನವಾಗಿದ್ದಳೆ.

'ಭುವನ ಇಲ್ಲಿ ನಲ್ಲಗುಂಡ್ಲುಕೊಂಡ ಇತ್ತಲ್ವಾ?'

.....

'ಭುವನ... ನಿನ್ನನ್ನೇ ಕೇಳ್ತಾ ಇರೋದು...'

'ಮಯೂ, ಅಲ್ಲಿ ದೊಡ್ಡ ಹಳ್ಳ ಇದೆಯಲ್ಲಾ... ಅದೇ..'

ಭುವನ ಸ್ವಲ್ಪ ಹೊತ್ತು ಮೌನದಿಂದಿದ್ದು ಮತ್ತೆ ಮುಂದುವರೆಸುತ್ತಾಳೆ.

'ಒಂದು ಕಾಲಕ್ಕೆ ಇತ್ತು. ಬೆಟ್ಟ ಕಳವಾಗಿ ಹತ್ತು ವರ್ಷದ ಮೇಲಾಯ್ತು...

## ಒಲುಮೆ



ಒಲುಮೆ ಎಂದರೆ
ಬಣ್ಣಿಸಲಾಗದ
ಜೀವದ ಬಂಧ
ಮನಸ್ಸುಗಳ ಮದುವೆ
ಅಂತರಂಗದ ಅನುಬಂಧ

★ **ಹೊಸಕೊಪ್ಪ ಶ್ರೀಧರ**

ಈಶ್ವರ

ವರದಲರೆಡ್ಡಿ ಬೆಟ್ಟಾನೇ ನುಂಗಿಬಿಟ್ಟ... ನಾವು ಸಣ್ಣವರಿದ್ದಾಗ ನಮಗೆಲ್ಲಾ ನಲ್ಲಗುಂಡ್ಲುಕೊಂಡ ಕೈಲಾಸ ಪರ್ವತ ಆಗಿತ್ತು... ಆದರೆ ಆ ನಂತರ ಈ ಪಾಪಿಗಳಿಗೆಲ್ಲಾ ಅದು ಗ್ರಾನೈಟ್ ಕಲ್ಲು... ಗ್ರಾನೈಟ್ ಗ್ರಾನೈಟ್ ಅಂತ ಬೆಟ್ಟಾನೇ ಬೋಳಿಸಿಬಿಟ್ಟ ಆಯಪ್ಪ... ಆಯಪ್ಪನಿಗೆ ಹಣ ಬಲ ಇದೆ, ತೋಳು ಬಲ ಇದೆ, ರಾಜಕಾರಣಿಗಳ ಬೆಂಬಲ ಇದೆ, ಅಧಿಕಾರಿಗಳ ಬೆಂಬಲ ಇದೆ... ಎಲ್ಲಾರೂ ಶಾಮೀಲು... ಸುಬ್ಬಾರೆಡ್ಡಿ ಮೇಸ್ಟ್ರು ಹೋರಾಟ ನಡೆಸಿದ್ರು... ಬೆಟ್ಟದ ಮುಂದೆ ಕುಳಿತು ರಾತ್ರಿ ಇಡೀ ಸತ್ಯಾಗ್ರಹ ನಡೆಸಿದ್ರು... ಅವರನ್ನೇ ಸಾಯಿಸಿಬಿಟ್ರು... ಕೊಲೆ ಮಾಡಿ ಅಲ್ಲಿನ ಮರಕ್ಕೆ ನೇಣು ಹಾಕಿ, ಅವರಿಗೆ ಬುದ್ಧಿ ಸರಿಯಿಲ್ಲ... ಸುಸೈಡ್ ಅಂತ ಕೇಸ್ ಮುಚ್ಚಿ ಹಾಕಿಬಿಟ್ರು... ವರದರೆಡ್ಡಿ, ಸುಬ್ಬಾರೆಡ್ಡಿ ಮೇಸ್ಟ್ರ ಸ್ಟೂಡೆಂಟೇ ಅಂತೆ... ಅವರ ತಾವೇ ಅಂತೆ ಓದಿದ್ದು... ಸುಬ್ಬಾರೆಡ್ಡಿ ಮೇಸ್ಟ್ರು ಸತ್ತು ಹತ್ತು ವರ್ಷದ ಮೇಲಾಯ್ತು...'

ನನ್ನ ಶರೀರ ಹೊತ್ತ ಕಾಲುಗಳು ಅಲ್ಲೆಲ್ಲಾ ಓಡಾಡಿದವು. ಹಳ್ಳದ ಮುಂದೆ ನಿಂತೆ. ಸುತ್ತಲೂ ಕಣ್ಣು ಹಾಯಿಸಿದೆ. ಸ್ವಲ್ಪ ದೂರದಲ್ಲಿ ಬೇಲಿಯ ಬುಡದಲ್ಲಿ ಕಸದ ಕುಪ್ಪೆಯ ಮೇಲೆ ಮುರಿದು ಬಿದ್ದ ನಾಗರ ಕಲ್ಲುಗಳು ಅನಾಥವಾಗಿ ಬಿದ್ದಿದ್ದವು. ಮರಗಳಿಲ್ಲದೆ ನೆಲ ಬೋಳಾಗಿತ್ತು. ಹೊಟ್ಟೆ ಹಿಂಡಿದಂತಾಯಿತು. ಸುಬ್ಬಾರೆಡ್ಡಿ ಮೇಸ್ಟ್ರು ನಮ್ಮನ್ನೆಲ್ಲಾ ಬೆಟ್ಟದ ಮುಂದೆ ನಿಲ್ಲಿಸಿ ಕೈ ಚಾಚಿಸಿ ಪ್ರತಿಜ್ಞೆ ಮಾಡಿಸಿದ್ದದ್ದು ನೆನಪಿಗೆ ಬರುತ್ತದೆ. 'ಈ ಬೆಟ್ಟ ಶಾಶ್ವತ. ಈ ಬೆಟ್ಟ ಇರುವವರೆಗೂ ನಮ್ಮ ಶಾಲೆಯ ಕೀರ್ತಿ ಬೆಳಗುತ್ತೇವೆ. ಪರಿಸರ ಕಾಪಾಡುತ್ತೇವೆ. ಗುರುಹಿರಿಯರನ್ನು ಗೌರವಿಸುತ್ತೇವೆ. ಈ ನಮ್ಮ ಪ್ರತಿಜ್ಞೆಗೆ ಈ ಬೆಟ್ಟವೇ ಸಾಕ್ಷಿ...' ಅದೆಷ್ಟು ಸಲ ಈ ಬೆಟ್ಟದ ಮುಂದೆ ನಿಂತು ಈ ರೀತಿ ಪ್ರತಿಜ್ಞೆ ಮಾಡಿಲ್ಲ...

ನನಗರಿವಿಲ್ಲದಂತೆಯೇ ನನ್ನ ಬಲಗೈ ಹಳ್ಳದತ್ತ ಚಾಚುತ್ತದೆ. ಭುವನ ನನ್ನ ಭುಜ ಹಿಡಿದು ಸಮಾಧಾನ ಮಾಡುತ್ತಾಳೆ. 'ಅದಕ್ಕೇ ಮಯೂರಿ... ಇಲ್ಲಿನ ವಿಷಯ ನಿನಗೆ ಹೇಳಲಿಲ್ಲ. ರಮೇಶಪ್ಪ ಸ್ವಾಮಿಗೂ ನಾನೇ ಹೇಳಿದೆ. ನಿನಗೇನೂ ಹೇಳಬೇಡ ಅಂತ...'

ಮುಂದೆ ಮುಂದೆ ನಡೆಯುತ್ತೇವೆ.

'ಅರೆ ಭುವನ, ಕೆರೆ ಎಲ್ಲಿ? ಕೆರೆ ಕಟ್ಟೆ ಎಲ್ಲಿ? ಕೆರೆ ಕಟ್ಟೆಗೆ ಒಂದು ಕಡೆ ಉದ್ದಕ್ಕೂ ಅಂಟಿಕೊಂಡು ಬೆಳೆದಿದ್ದ ದೊಡ್ಡ ದೊಡ್ಡ ಮರಗಳು ಎಲ್ಲಿ?' ಅಯ್ಯೋ ಮರ ಇಲ್ಲ. ತೋಪು ಇಲ್ಲ. ಎಲ್ಲಾ ಬೋಳು ಬೋಳು...

ಕೆರೆಯೇ ಕಣ್ಮರೆ ! ಕೆರೆಯ ಜಾಗದಲ್ಲಿ ನೀರಿಗೆ ಬದಲು ಅಲ್ಲಲ್ಲಿ ತೋಟಗಳು, ಗುಡಿಸಲುಗಳು, ಮರಳುಲಾರಿಗಳು...!

ಮೌನವಾಗಿ ಹೆಜ್ಜೆ ಹಾಕುತ್ತಿದ್ದ ಭುವನ ಸ್ವಲ್ಪ ಹೊತ್ತಿನ ನಂತರ ಗೊಣಗುತ್ತಾಳೆ. 'ಈ ಜನ ಕೆರೇನೂ ಬಿಡೋಲ್ಲಾ. ಕೆರೆ ಕಟ್ಟೇನೂ ಬಿಡೋಲ್ಲಾ. ಕಲ್ಲೂ ಬಿಡೋಲ್ಲಾ... ಬೆಟ್ಟಾನೂ ಬಿಡೋಲ್ಲಾ... ಮರಳೂ ಬಿಡೋಲ್ಲಾ... ಮಣ್ಣೂ ಬಿಡೋಲ್ಲಾ... ಮರಾನೂ ಬಿಡೋಲ್ಲಾ...'

ಬೋಳು ತಲೆ, ಮೂರು ನಾಮ ಹಣೆಯ ಕುಡುಕರಿಬ್ಬರು ಏಳುತ್ತಾ ಬೀಳುತ್ತಾ ತೂಗಾಡುತ್ತಾ ಅಮಧುರ ಕಂಠದಿಂದ ತೆಲುಗಿನಲ್ಲಿ ಹಾಡುತ್ತಾ ಅಡ್ಡ ಬರುತ್ತಾರೆ. ಕನ್ನಡದಲ್ಲಿ ಅದರ ಅರ್ಥ ಹೀಗಿದೆ. ಒಬ್ಬ ಹಾಡುತ್ತಾನೆ 'ಹಾಳು ಮಾಡಿದವನು ಹಾಳಾಗಲಿಲ್ಲ... ಮೇಲು ಮಾಡಿದವನು ಮೇಲೇಳಲಿಲ್ಲ...' ಮತ್ತೊಬ್ಬ ಹಾಡುತ್ತಾನೆ 'ದುರ್ಜನರಿಗಿದು ಸುಭಿಕ್ಷ ಕಾಲ... ಸಜ್ಜನರಿಗಿದು ದುರ್ಭಿಕ್ಷ ಕಾಲ...'

■